ಸಂದರ್ಶನದಿಂದ ಕರಿಛಾಯೆಯನ್ನು ಮಾತ್ರ ಕಳೆದುಕೊಂಡ ಕಾಫಿ ಮತ್ತು ಅರೆಸುಟ್ಟ ಸಾಸಿವೆಗಳು ಅಲ್ಲಲ್ಲಿ ಅಂಟಿದ ಒಣಕಲು ಉಪ್ಪಿಟ್ಟನ್ನು ಅಸಡ್ಡೆಯಿಂದ ನುಂಗಿಹಾಕಿ, 'ಶ್ರೀಕೃಷ್ಣ, ನೀನು ನಿಷ್ಕರುಣಿ, ನಿರ್ದಯಿ, ಯೂಸ್‌ಲೆಸ್' ಎಂದು ಆರ್ತನಾದ ಮಾಡಿದ. ಕತ್ತಿಯಿಂದ ಕಂಡ ಕಂಡವರನ್ನೆಲ್ಲಾ ಕೊಚ್ಚಿಹಾಕಬೇಕೆಂಬ ಒಂದು ಭಾವವುಂಟಾಗಿ ಅಸಹನೆಯನ್ನು ಹತ್ತಿಕ್ಕಿಕೊಂಡು, ಇಸ್ತ್ರಿಯಿಲ್ಲದೆ ಟೆಲಿಫೋನು ಕಂಬದಂತಾದ ಪೇಂಟನ್ನು ಸಿಲುಕಿಸಿ ಒಂದು ಬುಶ್‌ಶರ್ಟನ್ನು ಅದರ ಮೇಲೆಸೆದು ಹವಾಯಿ ಚಪ್ಪಲಿಗಳೊಳಗೆ ಕಾಲುಗಳನ್ನು ಯಾಂತ್ರಿಕವಾಗಿ ತೂರಿ ಮನೆಯಿಂದ ಹೊರಬಂದು ನಾಲ್ಕು ಹೆಜ್ಜೆ ನಡೆದಾಗ 'ಮಿಸ್ಟರ್ ವೆಂಕಟರಮಣ್...' ಎಂದು ಹಿಂದಿನಿಂದ ಪೋಸ್ಟ್‌ಮನ್ ಕರೆದು ಒಂದು ರಿಜಿಸ್ಟರ್ಡ್ ಲಕೋಟೆಯನ್ನು ಕೈಗಿತ್ತ.

**ಅವಳ ಪ್ರೇಮಕ್ಕಾಗಿ ಪರದಾಡಿ ಭಗ್ನತೆಯನ್ನನುಭವಿಸಿ ಪೀಯೋನು ಮಗ ಸ್ಯಾನಿಟರಿ ಇನ್‌ಸ್ಪೆಕ್ಟರನ ಮಗಳನ್ನು ಮದುವೆಯಾಗುವುದು ಸಿನಿಮದೊಳಗಣ ಕತೆಯಲ್ಲಿ ಮಾತ್ರ ಎಂಬ ಕಟುಸತ್ಯವನ್ನು ಅರ್ಥಮಾಡಿಕೊಂಡಮೇಲೆ ಉದ್ಯೋಗಕ್ಕಾಗಿ ನಡೆಸಿದ ಜೀವನ್ಮರಣ ಹೋರಾಟದಲ್ಲಿ ಪ್ರೇಮ–ಮದುವೆಗಳ ಯೋಚನೆಯನ್ನು ಪುಡಿಗೈದಿದ್ದ ವೆಂಕಟರಮಣ.**

ಕುತೂಹಲವನ್ನು ತಡೆದುಕೊಂಡು, ಸಹಿಹಾಕಿ, ಲಕೋಟೆಯನ್ನು ಇಸಕೊಂಡು, ಒಡೆದು ಓದಿದಾಗ ಒಮ್ಮೆ ಹೃದಯದ ಬಡಿತವೇ ನಿಂತಂತಾಯಿತು. ತಲೆ ಗಿರ್ರನೆ ಸುತ್ತಿ ಬವಳಿ ಬಂದಂತಾಗಿ, ಮರುಕ್ಷಣವೇ ಚೇತರಿಸಿಕೊಂಡು, ಕಣ್ಣೀರು ತಂದುಕೊಂಡು ಒಮ್ಮೆ ನಿಂತಲ್ಲೇ ಮೇಲ್ಲನೆ ಒಗೆದು ಒಳಗೋಡಿ, ಬಚ್ಚಲಿನಲ್ಲಿ ಪಾತ್ರೆಗಳನ್ನು ತೊಳೆಯುತ್ತಿದ್ದ ತಾಯಿಯನ್ನು ನೋಡಿ, ತನ್ನ ಗಂಟಲು ಬಿರಿಯುವಂತೆ, 'ಅಮ್ಮಾ, ನನಗೆ ಉದ್ಯೋಗ ಸಿಕ್ಕಿತು' ಎಂದು ಅರಚಿ ಅಪ್ಪನ ಕೋಣೆಯ ಕಡೆಗೆ ಧಾವಿಸಿದ.

*****

ರಾಷ್ಟ್ರೀಕೃತ ಬ್ಯಾಂಕುಗಳು, ಅರಾಷ್ಟ್ರೀಕೃತ ಬ್ಯಾಂಕುಗಳು, ಕೇಂದ್ರ ಸರಕಾರ, ರಾಜ್ಯ ಸರಕಾರ, ಇನ್ಶೂರೆನ್ಸ್ ಕಂಪೆನಿ, ಇದ್ಯಾವುದರ ಹೆಸರೂ ತನ್ನ ನಶೀಬಿನ ಕಡತದಲ್ಲಿ ಕಂಡುಬರದೆ ಪಾಂಡುರಂಗರಾಯರ ಪಾಲುದಾರಿಕೆಯ ಡಿಸ್ಟ್ರಿಕ್ಟ್ ಕೊ–ಆಪರೇಟಿವ್ ಬ್ಯಾಂಕಿನ ಹೆಸರು ಕೊರೆಯಲ್ಪಟ್ಟದ್ದನ್ನು ಕಂಡು ಬಿ.ಎ. ಫಸ್ಟ್‌ಕ್ಲಾಸ್ ಅರ್ಥಶಾಸ್ತ್ರ ಪ್ರವೀಣ ಪೀಯೋನು ದಾಸಪ್ಪನ ಮಗ ವೆಂಕಟರಮಣನಿಗೆ ಚೋದ್ಯವೆನಿದರೂ, ಶ್ರೀಕೃಷ್ಣ ಇಷ್ಟನ್ನಾದರೂ ಕರುಣಿಸಿದನಲ್ಲ ಎಂದು ಅವನಿಗೆ ಸಾಷ್ಟಾಂಗ ವಂದನೆ ಮಾಡಿ ಕೊ–ಆಪರೇಟಿವ್ ಬ್ಯಾಂಕ್ ನುಗ್ಗಿ ಹಿಂದಿ ಸಿನಿಮದ ಖಳನಾಯಕನಂತೆ ತೋರುತ್ತಿದ್ದ ಮ್ಯಾನೇಜರ್ ರೋಡ್ರಿಗ್ಸರ ಮುಂದೆ ಅಪಾಯಿಂಟ್‌ಮೆಂಟ್ ಲೆಟರನ್ನು ನಮ್ರಾತಿನಮ್ರನಾಗಿ ಇರಿಸಿದ. ರೋಡ್ರಿಗ್ಸ್ ಮಹಾಶಯರು ತಮ್ಮ ಪೈಪನ್ನು ಬೆರಳುಗಳ ನಡುವೆ ಇರಿಸಿ ತಮ್ಮ ಸುಂದರವಾದ ಮುಗುಳ್ನಗುವನ್ನು ಬೀರಿ ಸ್ವಾಗತಿಸಿ, ಕುಳಿತುಕೊಳ್ಳಲು